**Regional Language - Kannada**

**ಅರ್ಜಿ ಸಲ್ಲಿಸುವುದು ಹೇಗೆ (ಆನ್‌ಲೈನ್ ಅರ್ಜಿ ಸಲ್ಲಿಕೆ ಕಾರ್ಯವಿಧಾನ) - ಕನ್ನಡ**

**ಹಂತ ಹಂತದ ಪ್ರಕ್ರಿಯೆ:**

1. ಆಧಾರ್‌ಗೆ ಲಿಂಕ್ ಆಗಿರುವ ಮೊಬೈಲ್ ನಂಬರ್:
   ನಿಮ್ಮ ಇತ್ತೀಚಿನ ಮೊಬೈಲ್ ನಂಬರ್ ನಿಮ್ಮ ಆಧಾರ್‌ಗೆ ಲಿಂಕ್ ಆಗಿದೆ ಎಂದು ಖಾತ್ರಿಪಡಿಸಿ, ಯಾಕೆಂದರೆ ನೋಂದಣಿ ವೇಳೆ OTP ಮೂಲಕ ಅದನ್ನು ದೃಢೀಕರಿಸಲಾಗುತ್ತದೆ.

2. **ಆಧಾರ್‌ನಲ್ಲಿ ಇತ್ತೀಚಿನ ಫೋಟೋ**
   ಇ-ಆಧಾರ್ ಅಥವಾ ಆಫ್‌ಲೈನ್ ಆಧಾರ್ XML ಡೌನ್‌ಲೋಡ್ ಮಾಡುವ ಮುನ್ನ ಆಧಾರ್‌ನಲ್ಲಿ ನಿಮ್ಮ ಇತ್ತೀಚಿನ ಫೋಟೋವನ್ನು ಅಪ್‌ಡೇಟ್ ಮಾಡಿ. ಅಭ್ಯರ್ಥಿಯ ಅರ್ಜಿಯನ್ನು ಅನುಮೋದಿಸುವಾಗ ರಿಜಿಸ್ಟ್ರಾರ್ ಬಳಕೆದಾರರು ಇದನ್ನು ದೃಢೀಕರಿಸುತ್ತಾರೆ.

3. **ಆಫ್‌ಲೈನ್ ಆಧಾರ್ XML ಫೈಲ್ ಡೌನ್‌ಲೋಡ್**
   https://myaadhaar.uidai.gov.in/offline-ekyc ಗೆ ಭೇಟಿ ನೀಡಿ, ನಿಮ್ಮ ಆಫ್‌ಲೈನ್ ಆಧಾರ್ XML ಜನರೇಟ್ ಮಾಡಿ ಮತ್ತು ನಿಮ್ಮ ಆಯ್ಕೆಯ "ಶೇರ್ ಕೋಡ್" ಸೆಟ್ ಮಾಡಿ.

4. **ಹೊಸ ಬಳಕೆದಾರರನ್ನು ರಚಿಸಿ**
   https://uidai.nseitexams.com/UIDAI/LoginAction_input.action ಗೆ ಹೋಗಿ, ನಿಮ್ಮ ಆಫ್‌ಲೈನ್ ಆಧಾರ್ XML ಫೈಲ್ ಅನ್ನು ಅಪ್‌ಲೋಡ್ ಮಾಡಿ, ಶೇರ್ ಕೋಡ್ ಮತ್ತು ಮೊಬೈಲ್ ನಂಬರ್ (ಆಧಾರ್ ಪ್ರಕಾರ) ನಮೂದಿಸಿ ಮತ್ತು ನೋಂದಣಿ ಪೂರ್ಣಗೊಳಿಸಿ.

5. **OTP ದೃಢೀಕರಣ ಮತ್ತು ಅನುಮತಿ**
   ಯಶಸ್ವಿಯಾಗಿ ಆಧಾರ್ ಮತ್ತು ಮೊಬೈಲ್ ದೃಢೀಕರಣವಾದ ಬಳಿಕ, ನಿಮ್ಮ ಮೊಬೈಲ್ ನಂಬರ್‌ಗೆ ಒಂದು OTP ಕಳುಹಿಸಲಾಗುತ್ತದೆ. ಪರೀಕ್ಷಾ ಉದ್ದೇಶಕ್ಕಾಗಿ ನಿಮ್ಮ ಆಧಾರ್ ಡೇಟಾ ಬಳಸಲು ಅನುಮತಿ ಒದಗಿಸಲು OTP ನಮೂದಿಸಿ.

6. **ನೋಂದಣಿ ಕ್ರೆಡೆನ್ಶಿಯಲ್‌ಗಳನ್ನು ಸ್ವೀಕರಿಸಿ**
ನೋಂದಣಿ ID ಮತ್ತು ಡೀಫಾಲ್ಟ್ ಪಾಸ್‌ವರ್ಡ್ ಅನ್ನು ನಿಮ್ಮ ನೋಂದಾಯಿತ ಮೊಬೈಲ್ ನಂಬರ್ ಮತ್ತು ಇಮೇಲ್‌ಗೆ ಕಳುಹಿಸಲಾಗುತ್ತದೆ. ಮೊದಲ ಲಾಗಿನ್‌ನಲ್ಲಿ ಪಾಸ್‌ವರ್ಡ್ ಬದಲಾಯಿಸಿ ಮತ್ತು ಭವಿಷ್ಯದ ಬಳಕೆಗಾಗಿ ನಿಮ್ಮ ಕ್ರೆಡೆನ್ಶಿಯಲ್‌ಗಳನ್ನು ಸುರಕ್ಷಿತಗೊಳಿಸಿ.

7. **ಅರ್ಜಿ ಫಾರಂ ಅನ್ನು ಭರ್ತಿ ಮಾಡಿ ಮತ್ತು ಸಲ್ಲಿಸಿ**
   - ನಿಮ್ಮ ನೋಂದಣಿ ID ಮತ್ತು ಹೊಸ ಪಾಸ್‌ವರ್ಡ್ ಮೂಲಕ ಲಾಗಿನ್ ಮಾಡಿ
   - ಪೂರ್ವ ಭರ್ತಿಯಾದ ಆಧಾರ್ ವಿವರಗಳನ್ನು ದೃಢೀಕರಿಸಿ
   - ನಮೂದಿಸಿ: ಶಿಕ್ಷಣ ವಿವರಗಳು, ಪರೀಕ್ಷಾ ಮಟ್ಟ, ಪರೀಕ್ಷೆ ಭಾಷೆ, ನೋಂದಣಿ ಏಜೆನ್ಸಿ ಕೋಡ್, ನೋಂದಣಿ ಕೋಡ್, ಆದ್ಯತೆಯ ಪರೀಕ್ಷಾ ಕೇಂದ್ರದ ವಿವರಗಳು ಮತ್ತು LMS ವಿವರಗಳು
   - ಅಪ್‌ಲೋಡ್ ಮಾಡಿ: ಶೈಕ್ಷಣಿಕ ಮತ್ತು LMS ದಾಖಲೆಗಳು
   - ಭರ್ತಿ ಮಾಡಿ: ಪ್ರಶ್ನಾವಳಿ ವಿಭಾಗ
   - ಆಯಾ ರಿಜಿಸ್ಟ್ರಾರ್ ಅವರ ಅನುಮೋದನೆಗಾಗಿ ಅರ್ಜಿ ಸಲ್ಲಿಸಿ

8. **ರಿಜಿಸ್ಟ್ರಾರ್ ಅನುಮೋದನೆಯ ಟೈಮ್‌ಲೈನ್**
   - ಅರ್ಜಿಯನ್ನು 30 ದಿನಗಳೊಳಗೆ ಅನುಮೋದಿಸಬೇಕು, ಇಲ್ಲದೇ ಹೋದಲ್ಲಿ ಅದು ಸ್ವಯಂತಿರಸ್ಕೃತಗೊಳ್ಳಲಿದೆ.
   - ಒಬ್ಬರೇ ರಿಜಿಸ್ಟ್ರಾರ್‌ರಿಂದ ಅಭ್ಯರ್ಥಿಯ ಅರ್ಜಿಯು ಮೂರು ಬಾರಿ ತಿರಸ್ಕೃತಗೊಂಡರೆ, ಆ ರಿಜಿಸ್ಟ್ರಾರ್ ಅನ್ನು ಮತ್ತೆ ಆಯ್ಕೆ ಮಾಡಲು ಅಭ್ಯರ್ಥಿಗೆ ಅನುಮತಿಸಲಾಗುವುದಿಲ್ಲ

9. **ಪಾವತಿ ಮಾಡಿ**
ಅನುಮೋದನೆಯ ನಂತರ, ಅಭ್ಯರ್ಥಿಯು "ಪಾವತಿ" ಟ್ಯಾಬ್ ಮೂಲಕ 30 ದಿನಗಳೊಳಗೆ ಪಾವತಿಯನ್ನು ಮಾಡಬೇಕು. ಹಾಗೆ ಮಾಡಲು ವಿಫಲರಾದರೆ ಸ್ವಯಂ-ತಿರಸ್ಕೃತಗೊಳ್ಳುತ್ತದೆ.

**ಪಾವತಿ ವಿಧಾನಗಳು:**

   - ಆನ್‌ಲೈನ್: UPI, ಕ್ರೆಡಿಟ್/ಡೆಬಿಟ್ ಕಾರ್ಡ್, ನೆಟ್ ಬ್ಯಾಂಕಿಂಗ್

    - ಈಗಾಗಲೇ ಪಾವತಿಸಲಾಗಿದೆ: ರಿಜಿಸ್ಟ್ರಾರ್/EA ಮೂಲಕ ಆಫ್‌ಲೈನ್‌ನಲ್ಲಿ ಪಾವತಿಸಿದ ಅಭ್ಯರ್ಥಿಗಳಿಗೆ

11. **ಪಾವತಿ ರಸೀದಿಯನ್ನು ಡೌನ್‌ಲೋಡ್ ಮಾಡಿ**

    ಪಾವತಿಯು ಯಶಸ್ವಿಯಾದಾಗ, ಪಾವತಿ ರಸೀದಿಯನ್ನು ಡೌನ್‌ಲೋಡ್ ಮಾಡಿ ಸೇವ್ ಮಾಡಿ.

12. **ಅಣಕು ಪರೀಕ್ಷೆ ಮತ್ತು ಸ್ಲಾಟ್ ಬುಕಿಂಗ್**
    - ಟೆಸ್ಟ್ ಇಂಟರ್‌ಫೇಸ್‌ನೊಂದಿಗೆ ಪರಿಚಿತಗೊಳ್ಳಲು ಅಣಕು ಪರೀಕ್ಷೆಯನ್ನು ಎದುರಿಸಿ
    - ಸೀಟ್ ಬುಕಿಂಗ್ ಪುಟವನ್ನು ಪ್ರವೇಶಿಸಿ ಮತ್ತು ಪರೀಕ್ಷಾ ಕೇಂದ್ರ ಮತ್ತು ಪರೀಕ್ಷಾ ಸ್ಲಾಟ್ ಅನ್ನು ಆಯ್ಕೆ ಮಾಡಿ

13. **ಪರೀಕ್ಷಾ ಸ್ಲಾಟ್ ಮಾನ್ಯತೆ**

    ಯಶಸ್ವಿಯಾಗಿ ಪಾವತಿಯಾದ ದಿನಾಂಕದಿಂದ 180 ದಿನಗಳೊಳಗಾಗಿ ಪರೀಕ್ಷೆಯು ನಿಗದಿಗೊಳ್ಳಬೇಕು. ಹಾಗೆ ಮಾಡಲು ವಿಫಲರಾದರೆ ಸ್ವಯಂ ತಿರಸ್ಕೃತಗೊಳ್ಳಲಿದೆ ಮತ್ತು ಶುಲ್ಕ ನಷ್ಟವಾಗಲಿದೆ.

14. **ಸ್ವಯಂ-ತಿರಸ್ಕಾರದ ನಿರ್ವಹಣೆ**

    ಸ್ವಯಂ-ತಿರಸ್ಕೃತಗೊಂಡರೆ, ಅಭ್ಯರ್ಥಿಯು ಹೊಸ ಅರ್ಜಿಯನ್ನು ಸಲ್ಲಿಸುವ ಮೂಲಕ ಮರುಸಲ್ಲಿಕೆ ಮಾಡಬೇಕು, ಅನುಮೋದನೆ ಪಡೆಯಬೇಕು ಮತ್ತು ಹೊಸ ಪಾವತಿ ಮಾಡಬೇಕು.

15. **ಡ್ಮಿಟ್ ಕಾರ್ಡ್ ಡೌನ್‌ಲೋಡ್ ಮಾಡಿ**

    ಯಶಸ್ವಿಯಾಗಿ ಸ್ಲಾಟ್ ಬುಕಿಂಗ್ ಆದ ನಂತರ, ನಿಮ್ಮ ಅಡ್ಮಿಟ್ ಕಾರ್ಡ್ ಅನ್ನು ಡೌನ್‌ಲೋಡ್ ಮಾಡಿ, ಅದು ಇವುಗಳನ್ನು ಒಳಗೊಂಡಿರುತ್ತದೆ:
    - ಪರೀಕ್ಷಾ ಕೇಂದ್ರದ ಸ್ಥಳ ವಿವರಗಳು
    - ಪರೀಕ್ಷಾ ದಿನಾಂಕ ಮತ್ತು ಸಮಯ
    - ಇತರೆ ಪ್ರಮುಖ ಸೂಚನೆಗಳು

16. **ಆದ್ಯತೆಯ ಸ್ಥಳದಲ್ಲಿ ಸ್ಲಾಟ್ ಲಭ್ಯವಿಲ್ಲದಿದ್ದರೆ, ಈ ಕೆಳಗಿನ ಪಾಯಿಂಟರ್ ಅನ್ನು ಪರಿಗಣಿಸಿ:**

- ಯಶಸ್ವಿಯಾಗಿ ಪಾವತಿಯಾದ ನಂತರ 7 ದಿನಗಳ ಕಾಲ ಕಾಯಿರಿ
- ಆಗಲೂ ಸ್ಲಾಟ್‌ಗಳು ಲಭ್ಯವಿಲ್ಲದಿದ್ದರೆ, ಈ ವಿಳಾಸಕ್ಕೆ ಇಮೇಲ್ ಮಾಡಿ: uidai_admin@nseit.com
- ಪರಿಹಾರಗೊಳ್ಳದಿದ್ದರೆ, UIDAI HQ - ತರಬೇತಿ, ಪರೀಕ್ಷೆ ಮತ್ತು ಪ್ರಮಾಣೀಕರಣ ವಿಭಾಗ ಇಲ್ಲಿಗೆ ಎಸ್ಕಲೇಟ್ ಮಾಡಿ

17. ಅಭ್ಯರ್ಥಿಯು ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡರೆ ಅಥವಾ ಗೈರುಹಾಜರಾದರೆ ಮತ್ತು ಅವರ ಅಧಿಕಾರ ಹೊಂದಿರುವ ಅವಧಿಯ ವಾಯಿದೆ ಮುಗಿದರೆ, ಹೊಸ ಅರ್ಜಿ ಫಾರಂ ಅನ್ನು ಸಲ್ಲಿಸುವ ಮೂಲಕ ಮರುಸಲ್ಲಿಸಬೇಕಾಗುತ್ತದೆ.

    **ಗಮನಿಸಿ:** ಅಧಿಕಾರ ಹೊಂದಿರುವ ಅವಧಿಯು ರಿಜಿಸ್ಟ್ರಾರ್ ಅನುಮೋದನೆಯ ದಿನಾಂಕದಿಂದ 30-ದಿನಗಳ ವಿಂಡೋ ಆಗಿರುತ್ತದೆ.

18. ರಿಜಿಸ್ಟ್ರಾರ್ ಅನುಮೋದನೆಯ 30 ದಿನಗಳೊಳಗೆ ಅಭ್ಯರ್ಥಿಯು ಪರೀಕ್ಷೆಗೆ ಹಾಜರಾಗಬೇಕು. ಅನುತ್ತೀರ್ಣಗೊಂಡರೆ ಅಥವಾ ಗೈರಾದರೆ, ಅವಧಿ ಮುಗಿದ ನಂತರ ಹೊಸ ಅರ್ಜಿಯನ್ನು ಸಲ್ಲಿಸಬೇಕು.

19. **ಅನುತ್ತೀರ್ಣಗೊಂಡ ಮತ್ತು ಗೈರಾದ ಅಭ್ಯರ್ಥಿಗಳ ಮರುಪ್ರಯತ್ನದ ನಿಯಮಗಳು**
    - ಅರ್ಧ ಶುಲ್ಕದೊಂದಿಗೆ 3 ಮರುಪ್ರಯತ್ನಗಳನ್ನು ಅನುಮತಿಸಲಾಗಿದೆ
    - 3 ಪ್ರಯತ್ನಗಳ ನಂತರ, ಪುನಃ ಪೂರ್ಣ ಶುಲ್ಕವನ್ನು ವಿಧಿಸಲಾಗುತ್ತದೆ
    - ಪ್ರತಿ ಹೊಸ ಪ್ರಮಾಣೀಕರಣ ಪ್ರಯತ್ನಕ್ಕೆ ಈ ಆವೃತ್ತಿಯು ಪುನರಾವರ್ತನೆಗೊಳ್ಳುತ್ತದೆ

19. **ಮರುಪಾವತಿ ನೀತಿ ಇಲ್ಲ**
    ಶುಲ್ಕಗಳನ್ನು ಪಾವತಿಸಿದ ನಂತರ ಮರುಪಾವತಿಸಲಾಗುವುದಿಲ್ಲ. ಪಾವತಿ ವಿಫಲವಾದರೆ, ಸಂಪರ್ಕಿಸಿ: uidai_admin@nseit.com

20. **ಶುಲ್ಕ ಮಾನ್ಯತೆ**
    ಪ್ರಮಾಣೀಕರಣ ಶುಲ್ಕವು ಪಾವತಿಯ ದಿನಾಕದಿಂದ 180 ದಿನಗಳಿಗೆ ಮಾನ್ಯವಾಗಿರುತ್ತದೆ.

21. **ಪರೀಕ್ಷಾ ದಿನದಂದು ಅಗತ್ಯವಿರುವ ದಾಖಲೆಗಳು**

ಅಭ್ಯರ್ಥಿಗಳು ಇವುಗಳನ್ನು ಹೊಂದಿರಬೇಕು:

1. ತಮ್ಮ ಇ-ಆಧಾರ್‌ನ ಇತ್ತೀಚಿನ ಪ್ರತಿ (https://myaadhaar.uidai.gov.in/genricDownloadAadhaar/en ನಿಂದ ಡೌನ್‌ಲೋಡ್ ಮಾಡಿರುವುದು) ಅಥವಾ ಎಂಆಧಾರ್ / ಆಧಾರ್ PVC ಕಾರ್ಡ್ ಅಥವಾ ಇತ್ತೀಚಿನ ಭಾವಚಿತ್ರದೊಂದಿಗಿನ ಆಧಾರ್ ಪತ್ರ
2. ಪೋರ್ಟಲ್ ಅಡಿಯಲ್ಲಿ ಪ್ರದರ್ಶಿಸಲಾದ ಅಡ್ಮಿಟ್ ಕಾರ್ಡ್
   **ಗಮನಿಸಿ:** ಫೋಟೋವು ತಾಳೆಯಾಗದಿದ್ದರೆ ಅಥವಾ ಅಡ್ಮಿಟ್ ಕಾರ್ಡ್ ಇಲ್ಲದಿದ್ದರೆ, ಅಭ್ಯರ್ಥಿಯನ್ನು ಅನರ್ಹಗೊಳಿಸಲಾಗುತ್ತದೆ.

## 22. ಬೆಂಬಲ

"ನೋಂದಣಿ, ಅರ್ಜಿ ಫಾರಂ ಸಲ್ಲಿಕೆ, ಪರೀಕ್ಷೆ ಶುಲ್ಕ, ಪರೀಕ್ಷಾ ಕೇಂದ್ರ /ಪರೀಕ್ಷಾ ಸ್ಲಾಟ್ ಮತ್ತು ಟೆಸ್ಟಿಂಗ್ ಮತ್ತು ಪ್ರಮಾಣೀಕರಣ ಅರ್ಜಿ" ಕುರಿತ ಯಾವುದೇ ವಿಚಾರಣೆಗಳಿಗೆ, ಅಭ್ಯರ್ಥಿಗಳು ಕೆಳಗೆ ನೀಡಲಾದ ಸಂಖ್ಯೆಯಲ್ಲಿ ಸಂಪರ್ಕಿಸಬಹುದು:

**ದೂರವಾಣಿ ಸಂಖ್ಯೆ - 022-42706508**

**ಸಮಯ -**(ಸೋಮ-ಶನಿ, ಬೆಳಗ್ಗೆ 9:30- ಸಂಜೆ 6:00)

**ಇಮೇಲ್ -** uidai_admin@nseit.com

**UIDAI ಬೆಂಬಲ (ಪ್ರಮಾಣೀಕರಣ ನಂತರ)**

ಪ್ರಮಾಣಪತ್ರದ "ನಿಷ್ಕ್ರಿಯತೆ, ಹೆಸರು/UID/ಆಧಾರ್ ಸಂ. ತಾಳೆಯಾಗದಿರುವಿಕೆ" ಕುರಿತ ಯಾವುದೇ ಸಮಸ್ಯೆಗಳಿಗೆ, ಅಭ್ಯರ್ಥಿಗಳು ಕೆಳಗೆ ನೀಡಲಾದ ಸಂಖ್ಯೆಯಲ್ಲಿ ಸಂಪರ್ಕಿಸಬಹುದು:

o ಟೋಲ್ ಫ್ರೀ: 080-23099400

**ಸಮಯ : ಬೆಳಗ್ಗೆ 9:30 - ಸಂಜೆ 6:00 (ಸೋಮವಾರ -ಶನಿವಾರ)**

ಅಭ್ಯರ್ಥಿಗಳು ತಮ್ಮ ವಿಚಾರಣೆಗಳನ್ನು ಇಲ್ಲಿಗೆ ಕೂಡಾ ಸಲ್ಲಿಸಬಹುದು: techsupport@uidai.net.in